2. ಹಾಸನ ನಗರದಲ್ಲಿ ಮುನಿಸಿಪಾಲಿಟಿಯವರು ರೋಜ್‌ಗಾರ್ ಯೋಜನೆ ಅಡಿಯಲ್ಲಿ ಕಟ್ಟಿಸಿರುವ ಮಳಿಗೆಗಳನ್ನು ಬಾಡಿಗೆಗೆ ಕೊಡುವ ವಿಚಾರ

ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ) : ಮಾನ್ಯ ಅಧ್ಯಕ್ಷರೇ, ಹಾಸನ ಮುನಿಸಿಪಾಲಿಟಿಯವರು ರೋಜ್‌ಗಾರ್ ಯೋಜನೆಯಿಂದ ಹಾಸನದ ಹಳೇ ಬಸ್ ಸ್ಟ್ಯಾಂಡ್‌ನಲ್ಲಿ ಮಳಿಗೆಗಳನ್ನು ಕಟ್ಟಿಸುತ್ತಿದ್ದಾರೆ. ಈ ಮಳಿಗೆಗಳನ್ನು ಸ್ಥಳೀಯ ಪೇಪರುಗಳಲ್ಲಿ ಜಾಹೀರಾತು ಕೊಟ್ಟು ಟೆಂಡರ್ ಮುಖಾಂತರ ಬಾಡಿಗೆಗೆ ಕೊಟ್ಟರೆ ಹೆಚ್ಚು ಈ ವಿಚಾರದಲ್ಲಿ ನಿಯಮಾವಳಿಯಂತೆ ಅಂಗಡಿಗಳನ್ನು ಸ್ಥಳೀಯ ಪೇಪರ್‌ಗಳಲ್ಲಿ ಟೆಂಡರ್ ಪ್ರಕಟಿಸಿ ಹೆಚ್ಚು ಬಿಡ್‌ದಾರರಿಗೆ ಅಂಗಡಿಗಳನ್ನು ಬಾಡಿಗೆಗೆ ಕೊಡುವಂತೆ ಹಾಸನ ಮುನಿಸಿಪಾಲಿಟಿಯವರಿಗೆ ಆದೇಶ ಕೊಡುವಂತೆ ಮಾನ್ಯ ನಗರಾಭಿವೃದ್ಧಿ ಸಚಿವರ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಬಸವರಾಜ್ ಪಾಟೀಲ್ (ಪಶುಸಂಗೋಪನಾ ಸಚಿವರು) : ಮಾನ್ಯ ಅಧ್ಯಕ್ಷರೇ, ತಮ್ಮ ಅನುಮತಿಯನ್ನು ಪಡೆದು ಮಾನ್ಯ ನಗರಾಭಿವೃದ್ಧಿ ಸಚಿವರ ಪರವಾಗಿ ಈ ಕೆಳಕಂಡ ಹೇಳಿಕೆಯನ್ನು ನೀಡುತ್ತೇನೆ.

ನೆಹರೂ ರೋಜ್‌ಗಾರ್ ಯೋಜನೆಯಡಿಯಲ್ಲಿ ಹಾಸನ ನಗರಸಭೆಯು 18,10,500 ರೂಪಾಯಿಗಳ ವೆಚ್ಚದಲ್ಲಿ 18 ಅಂಗಡಿಗಳನ್ನು ನಿರ್ಮಿಸುವ ಕಾಮಗಾರಿಯನ್ನು ಕೈಗೆತ್ತಿಕೊಂಡಿದೆ. ಈ ಕಟ್ಟಡವು ನಿರ್ಮಾಣದ ಹಂತದಲ್ಲಿದ್ದು ಪೂರ್ಣಗೊಳ್ಳಲು ಇನ್ನೂ ಮೂರು ತಿಂಗಳ ಕಾಲಾವಕಾಶ ಬೇಕಾಗಿದೆ. ಈ ಕಟ್ಟಡವು ಪೂರ್ಣಗೊಂಡನಂತರ ಹಾಸನ ನಗರಸಭೆಯು ಈ ಅಂಗಡಿಗಳನ್ನು ಹಂಚಿಕೆ ಮಾಡುವ ಕಾರ್ಯವನ್ನು ಕೈಗೆತ್ತಿಕೊಳ್ಳಲಿದೆ.

ಶ್ರೀ ಕೆ.ಹೆಚ್. ಹನುಮೇಗೌಡ : ನಾನು ಕೇಳಿದ್ದು ಟೆಂಡರ್ ಕರೆದು ಕೊಡಿರಿ ಎಂದು ಬಾಡಿಗೆಗೆ ಕೊಡುವುದು ನನಗೂ ಗೊತ್ತು.

ಉಪಾಧ್ಯಕ್ಷರು : ಇದರ ಮೇಲೆ ತಾವು ಉಪ ಪ್ರಶ್ನೆ ಹಾಕುವಹಾಗೆ ಇಲ್ಲ. ಇದು ಒಂದು ಸ್ಟೇಟ್‌ಮೆಂಟ್ ಅಷ್ಟೆ.

3. ಸೇಡಂ ಕ್ಷೇತ್ರದಲ್ಲಿ ರಸ್ತೆ ಕಾಮಗಾರಿಗಳನ್ನು ಪೂರ್ಣಗೊಳಿಸುವುದು.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಅಧ್ಯಕ್ಷರೇ, ಶಾಸಕರ ಅಭಿಪ್ರಾಯದ ಮೇರೆಗೆ 1989-91ನೇ ಸಾಲಿನಲ್ಲಿ 12 ಲಕ್ಷ ರೂಪಾಯಿಗಳ ಕಾಮಗಾರಿಗಳನ್ನು ಲೋಕೋಪಯೋಗಿ ಇಲಾಖೆಯವರು ತೆಗೆದುಕೊಂಡು ಟೆಂಡರ್ ಸಹ ಕರೆಯಲಾಗಿತ್ತು. ಆದರೆ ನನ್ನ ಕ್ಷೇತ್ರ ಸೇಡಂನಲ್ಲಿ, ಮುಧೋಳ್ ಅಪ್ರೋಚ್ ರೋಡ್ ಪೋಲೀಸ್ ಸ್ಟೇಷನ್‌ವರೆಗೆ ಮಳಖೇಡ್-ಚಿತಾಪುರ ರೋಡ್, ರಾಜಶ್ರೀ ಕ್ರಾಸ್‌ವರೆಗೆ, ಹಾಗೂ ಸೇಡಂ ಕ್ಷೇತ್ರದ ಚಿತಾಪುರ ತಾಲೋಕಿನ ಸಾತನೂರು-ದಂದ್ರಕ್ಕಿ ರೋಡಿನ ಮೇಲೆ ಮತ್ತು ಸಾತನೂರ್-ಲಾಡ್ಲಾಪುರ್ ರೋಡಿನ ಮೇಲೆ ಹಳ್ಳಳ್ಳಿವರೆಗೆ ಕಾಮಗಾರಿಗಳನ್ನು ತೆಗೆದುಕೊಂಡು ಹಣ ಇಲ್ಲದ್ದಕ್ಕಾಗಿ ಗುತ್ತೇದಾರರು ಕೇಲಸ ಮಾಡಿಲ್ಲವೆಂದು ಹೇಳುತ್ತಿರುವುದು ನಿಜವೇ? ಎರಡು ವರ್ಷಗಳಾದರೂ ಈ ಕಾಮಗಾರಿಗಳನ್ನು ಪೂರ್ತಿ ಮಾಡಲಿಲ್ಲವೇಕೆ? ಈ ಕಾಮಗಾರಿಗಳನ್ನು ಪೂರ್ತಿಗೊಳಿಸಲು ಸರಕಾರದ ಗಮನವನ್ನು ಸೆಳೆಯುತ್ತೇನೆ.